**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-366/2024 **PW**-1

**ದಿಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎ ಬಿ ವಕೀಲರಿಂದಃ**

ವಿದ್ಯಾನಗರದಲ್ಲಿ ಪ್ರತಿವರ್ಷ ಆಸ್ತಿಯ ಬೆಲೆ 5 ರಿಂದ 10 ಲಕ್ಷ ರೂ ಗಳವರೆಗೆ ಏರುತ್ತಾ ಹೋಗುತ್ತದೆಂದರೆ ಸಾಕ್ಷಿ ಅಷ್ಟು ಏರುವದಿಲ್ಲ ಎನ್ನುತ್ತಾರೆ. ನಿಮ್ಮ ಪ್ರಕಾರ ಎಷ್ಟು ಎಂದರೆ ಸಾಕ್ಷಿ ಅದು ಅಪಾರ್ಟಮೆಂಟ ಇದ್ದು ಜಾಸ್ತಿ ಹೋಗುವದಿಲ್ಲ ಎನ್ನುತ್ತಾರೆ. ಪ್ರತಿವರ್ಷದ ಬೆಲೆ 5 ರಿಂದ 10 ಲಕ್ಷ ಏರುತ್ತಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಕಿಮ್ಮತ್ತು ಸದ್ಯಕ್ಕೆ 65 ರಿಂದ 75 ಲಕ್ಷ ರೂ ಇದೆ ಎಂದರೆ ಸಾಕ್ಷಿ ನಾನು ತೆಗೆದುಕೊಳ್ಳುವ ಸಮಯದಲ್ಲಿ 30 ರಿಂದ 40 ಲಕ್ಷ ರೂ ಇತ್ತು ಎನ್ನುತ್ತಾರೆ. ನಾನು ದಾವಾ ಸಲ್ಲಿಸುವ ಸಮಯದಲ್ಲಿ 30 ರಿಂದ 40 ಲಕ್ಷ ರೂ ಗಳ ಮೇಲೆ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಸಾಕ್ಷಿ ಕಟ್ಟಿದ್ದೇನೆ ಎನ್ನುತ್ತಾರೆ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಖ್ಯವಾದ ದಾಖಲೆಗಳನ್ನು ಹಾಜರುಪಡಿಸಲು ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.